# ಕೃತಜ್ಞತೆ

ಬಂಗಾಳದ ವಿಖ್ಯಾತ ನಾಟಕಕಾರರಾದ ಶ್ರೀ|| ದ್ವಿಜೇಂದ್ರಲಾಲ್ ರಾಯರ ನಾಟಕದ ಅವಲಂಬನದಿಂದ ಈ ನಾಟಕ ರಚಿತವಾಗಿದೆ.

ದಕ್ಷಿಣ ಭಾರತದ ವಿಖ್ಯಾತ ನಟರೂ, ಕನ್ನಡ ರಂಗಭೂಮಿಯ ಜ್ವಲಂತ ವ್ಯಕ್ತಿಗಳಲ್ಲೊಬ್ಬರೂ ಆಗಿದ್ದ ದಿವಂಗತ ಮಹಮದ್ ಪೀರ್ ಇವರು ೧೯೩೨ರಲ್ಲಿ ಈ ನಾಟಕವನ್ನು ಅಭಿನಯಿಸಿದಾಗ ಅವರ ಸಲಹೆಯಂತೆ ಕೆಲವು ಬದಲಾವಣೆಗಳು ಮಾಡಲ್ಪಟ್ಟವು. ಕೆಲವು ದೃಶ್ಯಗಳು ಬೆಳೆದವು, ಕೆಲವು ಬಿಡಲ್ಪಟ್ಟವು, ಕೆಲವು ಹೊಸದಾಗಿ ಸೇರಿಸಲ್ಪಟ್ಟವು. ಅಭಿನಯಕ್ಕೆ ಅನುಕೂಲಿಸುವಂತೆ ಮೇಲ್ಕಂಡ ಮಾರ್ಪಾಟುಗಳನ್ನು ಈ ಮುದ್ರಣದಲ್ಲಿ ಸೇರಿಸಿದೆ.

ಕನ್ನಡ ರಂಗಮಂಚದಲ್ಲಿ ಈ ನಾಟಕಕ್ಕೆ ದೊರಕಿರುವ ಕೀರ್ತಿ ಗೌರವಗಳಿಗೆ ದಿವಂಗತ ಎಂ. ಪೀರರ ಪ್ರಯೋಗ ಕೌಶಲ ಮತ್ತು ಅವರ ಒಡೆತನದಲ್ಲಿ ನಡೆಯುತ್ತಿದ್ದ ಶ್ರೀ ಚಂದ್ರಕಲಾ ನಾಟಕ ಮಂಡಲಿಯ ನಟೀ ನಟರ ಅಭಿನಯ ನೈಪುಣ್ಯವೂ ಕಾರಣ. ಇದಕ್ಕಾಗಿ ನಾನು ಅವರೆಲ್ಲರಿಗೆ ಚಿರಋಣಿಯಾಗಿದ್ದೇನೆ.

ಬೆಂಗಳೂರು ನಗರ — ಬಿ. ಪುಟ್ಟಸ್ವಾಮಯ್ಯ

ತಾ|| ೨೬-೬-೧೯೪೬

ನಾದಿರಾ—ಅಕ್ಕ, ನೀನಾ ಕನಸು ಎಷ್ಟೊಂದು ಭಯಾನಕವಾಗಿತ್ತೆಂಬುದನ್ನು ಬಲ್ಲೆಯಾದರೆ....ಅಯ್ಯೋ ಸಹಿಸಲಾರೆನು.

ಜಹನಾರಾ—ದಾರಾ, ಏನನ್ನು ಯೋಚಿಸುತ್ತಿರುವೆ ? ಇಷ್ಟೊಂದು ತರಳನೇ ನೀನು ? ತಂದೆಯ ಸಮ್ಮತಿಯನ್ನು ಹೊಂದಿದ್ದಾಯಿತು ; ಇನ್ನು ಹೆಂಡತಿಯ ಸಮ್ಮತಿಯನ್ನು ಹೊಂದಬೇಕಲ್ಲವೆ? ನೆನಪಿರಲಿ ದಾರಾ, ಎದುರಿನಲ್ಲಿ ಕಠೋರವಾದ ಕರ್ತವ್ಯ, ಈಗ ಚಿಂತಿಸುವ ಸಮಯವಿಲ್ಲ.

ದಾರಾ—ಸತ್ಯ, ನಾದಿರಾ, ಈ ಯುದ್ಧವು ಅನಿವಾರ್ಯವಾದುದು. ನಾನಿನ್ನು ಹೊರಡುವೆನು.

ವೀರ ವನಿತೆಯ ತೆರದೆ ಧೀರೋಕ್ತಿಗಳನಾಡಿ
ಹರುಷಚಿತ್ತದೊಳೆನ್ನ ಕಳುಹು ನೀನು.

ನಾದಿರಾ—ಕನಸಿನಲಿ ಕಂಡ ಹತಿ ಮನಕೆ ಇತ್ತುದು ಭೀತಿ
ಜಯಕಾರವಿದು ಗಳದೆ ಲೀನವಹುದು.

ದಾರಾ—ಜಯಪರಾಜಯಗಳನು ನಿಯಮಿಸುವ ವಿಧಿ ಬೇರೆ
ಬರಿದೆ ನಿನಗಿಂದದರ ಚಿಂತೆಯೇಕೆ ?

ನಾದಿರಾ—ವಿಧಿ ಅಕಟ ! ನಿಷ್ಠುರನು ; ವಿಧಿಸುವನು ದುಃಖವನು
ಬೇಡ ನಿಮಗೀ ಯುದ್ಧ ಚಿಂತೆಯಿನ್ನು.

ದಾರಾ—ಎನ್ನ ನಿಯಳಾಗಿ ನೀನಿಂತಳುವರೇ ? ಛೀ !

ನಾದಿರಾ—ಕಣ್ಣೀರೆ ಎನಗಿಂದು ಗತಿಯು ಜಗದೆ.

ದಾರಾ—ಸಾಕು, ಈ ಭಯದ ನುಡಿ. ಸಮರವೆನಗಿಂದು
ಕರ್ತವ್ಯವೆನಿಸುವುದು ಬಿಡು, ಪೋಗಿ ಬರುವೆ.

(ಹೋಗುವನು.)

ನಾದಿರಾ—ಎಂತಹ ನಿಷ್ಠುರಳೇ ನೀನು. ಬಾ ಸಿಪಾರ್ (ಹೋಗುವರು)

ಜಹನಾರಾ—ಏಕಿಷ್ಟೊಂದು ಭಯಗ್ರಸ್ಥಳಾಗಿರುವಳೊ ಕಾಣೆ.

(ಷಾಜಹಾನನು ಮತ್ತೆ ಬರುವನು)

ಷಾಜಹಾನ್—ದಾರನು ಹೊರಟುಹೋದನೆ ಜಹನಾರಾ ?

ಜಹನಾರಾ—ಹೌದು ಅಪ್ಪ.

ಷಾಜಹಾನ್—(ಸ್ವಲ್ಪ ಹೊತ್ತು ಸುಮ್ಮನಿದ್ದು ಬಳಿಕ) ಜಹನಾರಾ....

ಜಹನಾರಾ—ಅಪ್ಪ.

ಷಾಜಹಾ೯—ನೀನೂ ಈ ಗೊಂದಲದಲ್ಲಿ....

ಜಹನಾರಾ—ಯಾವ ಗೊಂದಲದಲ್ಲಿ?

ಷಾಜಹಾ೯—ಈ ಅಣ್ಣ ತಮ್ಮಂದಿರ ಗೊಂದಲದಲ್ಲಿ. ಜಹನಾರಾ, ಕೇಳು. ಇದು ಬಹು ಮರ್ಮಾಂತಿಕವಾದ ಕೃತ್ಯ. ಏನು ಮಾಡಲಿ, ಇಂದದರ ಪ್ರಯೋಜನವು ಒದಗಿತು; ಬೇರೆ ಉಪಾಯವಿಲ್ಲ. ಆದರೆ ನೀನು ಈ ಗೊಂದಲದಲ್ಲಿ ಸಿಕ್ಕಬೇಡ ಜಹನಾರಾ. ನಿನ್ನ ಕರ್ತವ್ಯವು ಸ್ನೇಹ, ಭಕ್ತಿ, ಹಾಗೂ ಅನುಕಂಪ. ಈ ಆಂದೋಳನದಿಂದ ನೀನೂ ಕೆಡಬೇಡ; ಅಂತತಃ ಪವಿತ್ರಳಾಗಿರು.

## ಎರಡನೆ ದೃಶ್ಯ

ಸ್ಥಾನ—ನರ್ಮದಾತೀರದಲ್ಲಿ ಮುರಾದನ ಶಿಬಿರ. ಕಾಲ—ರಾತ್ರಿ.

(ದಿಲ್ದಾರ್ ಏಕಾಂಗಿ)

ದಿಲ್ದಾರ್—ಜ್ಞಾನಾರ್ಜನೆಗಾಗಿ ದೇಶವಿದೇಶಗಳನ್ನು ಸುತ್ತುತ್ತಾ ಭಾರತವರ್ಷಕ್ಕೆ ಬಂದ ನನಗೆ ಈ ಪಾರಿವಾರಿಕವೇಷವು ದೊರಕಿತು. ಇಸ್ಲಾಂ ಧರ್ಮದ ಸರ್ವೋತ್ತಮ ಪಂಡಿತನೆಂದು ಹೆಸರಾದ ನಾನು ಈಗ ಷಹಜಾದಾ ಮುರಾದನ ವಿದೂಷಕನಾಗಿರುವೆನು. ಹಾಜಿ ನಿಯಮತ್‌ಖಾ೯, ನಿನಗೆಲ್ಲವೂ ಶೋಭಿಸುವುದಲ್ಲವೇ? ಅದು ಹೊರತು ಮೊಗಲ ಸಾಮ್ರಾಜ್ಯದ ಕುಟಿಲ ರಾಜನೀತಿಯ ರಹಸ್ಯವನ್ನು ತಿಳಿಯುವ ಉಪಾಯವಿಲ್ಲ. (ಚಿಂತಿಸಿ) ರಾಜನೀತಿ! ರಾಜನೀತಿ! ಧರ್ಮದ ಹೆಸರಿನಿಂದ ದುರ್ಬಲರನ್ನು ಹಿಂಸಿಸುತಾ ಇಹಲೋಕದ ಸುಖಸಂತೋಷಗಳಿಗಾಗಿ ಪರಲೋಕವನ್ನು ಮರೆತು ಸ್ವಾರ್ಥವನ್ನು ಸಾಧಿಸುವ ಮಹಾವಿದ್ಯೆಗೆ ರಾಜನೀತಿಯೆಂಬ ದೊಡ್ಡ ಹೆಸರೇ? ಸಾಮ್ರಾಜ್ಯ ಲೋಭದಿಂದ ಭಾರತವರ್ಷದಲ್ಲಿಂದು ಈ ಕುಟಿಲ ರಾಜನೀತಿಯ ಭಯಾನಕ ಅವತರಣವು ಅಭಿನೀತವಾಗುತ್ತಿರುವುದು. ವೃದ್ಧ ಸಾಮ್ರಾಟ್ ಷಾಜಹಾನನ ಅಖಂಡ ಸಾಮ್ರಾಜ್ಯದ ಸಲುವಾಗಿ ಅವನ ನಾಲ್ಕು ಮಂದಿ ಪುತ್ರರು ತಮ್ಮತಮ್ಮಲ್ಲಿ ಕಲಹಕ್ಕೆ ಪ್ರಾರಂಭಿಸಿರುವರು. ಅವರಲ್ಲಿ ಮುರಾದನೂ, ಔರಂಗಜೀಬನೂ ಈಗೇನೋ ಒಟ್ಟುಗೂಡಿರುವರು. ಆದರೆ, ಭಿಂನಪ್ರಕೃತಿಯ ಅವರನ್ನೊಂದುಗೂಡಿಸಿರುವ ಲೋಭವೇ ಕೊನೆಗೆ ಅವರ

**ಯಶೋವಂತ—ಮಹಾಮಾಯಿ. ಇದೇನು ಹೊಸಪದ್ಧತಿ ! ಯುದ್ಧ ರಂಗದಿಂದ ಹಿಂದಿರುಗಿದ ಪತಿಯನ್ನು ಅಭಿನಂದಿಸುವ ನೂತನ ವಿಧಾನವೋ ಇದು ?**

ಮಹಾಮಾಯಿ—ಮಹಾರಾಜ, ನೀವು ಯುದ್ಧದಲ್ಲಿ ಪರಾಜಿತರಲ್ಲವೇ?

ಯಶೋವಂತ—ಹೌದು.

ಮಹಾಮಾಯಿ—ಹಾಗಾದರೆ ಈಗ ನಿಮಗೀ ದುರ್ಗದಲ್ಲಿ ಪ್ರವೇಶವಿಲ್ಲ.

ಯಶೋವಂತ—ಜಯ ಪರಾಜಯಗಳು ನಮ್ಮ ಅಧೀನವಲ್ಲ, ಮಹಾಮಾಯಿ.

ಮಹಾಮಾಯಿ—ಈ ಹೇಡಿತನದ ಮಾತು ಮಹಾರಾಜ ಯಶೋವಂತ ಸಿಂಹರ ಬಾಯಿಂದ ಹೊರಟಿತೇ ! ಹಾ ! ಡಿಲ್ಲಿಯ ಬಾದಷಾಹಿ ವಿಲಾಸ ಲೋಲುಪತೆಯಿಂದ ರಾಜಪೂತರ ಕ್ಷಾತ್ರ ಸೂರ್ಯನಿಗೆ ಗ್ರಹಣ ಹಿಡಿಯಿತೆಂದು ತೋರುವುದು.

ಯಶೋವಂತ—ಸಾಕುಮಾಡು ನಿನ್ನ ಆವೇಶವನ್ನು. ಈ ಪ್ರಹರಿಗಳಿಗೆ ಹೋಗುವಂತೆ ಹೇಳು.

(ಇಂಗಿತಮಾಡುವಳು, ಪ್ರಹರಿಗಳು ನಿಷ್ಕ್ರಾಂತ)

ಪಥಶ್ರಾಂತರಾಗಿ ಚದುರಿದ ನನ್ನ ಸೈನಿಕರು ಒಟ್ಟುಗೂಡುತ್ತಲೆ ಸಮಯವನ್ನು ಕಾದು ಪುನಃ ಔರಂಗಜೇಬನನ್ನು ಎದುರಿಸುವೆನು. ನಾನೀದುರ್ಗದಲ್ಲಿರುವುದು ಎರಡು ದಿನ ಮಾತ್ರ.

ಮಹಾಮಾಯಿ—ಹಾಗಾದರೆ ಆ ಎರಡು ದಿನಗಳ ಸಲುವಾಗಿ ನಿಮ್ಮ ಸೋತು ಕಂಗೆಟ್ಟ ಮುಖವನ್ನು ಜೋಧಪುರದಲ್ಲಿ ಪ್ರದರ್ಶಿಸಿದಿರೇಕೆ, ಮಹಾರಾಜ ? ರಾಜಪುತಾಣದ ಪೂರ್ವ ಗೌರವವು ಕ್ಷತ್ರಿಯ ರಮಣಿಯರ ಸ್ಮೃತಿ ಪಥದಲ್ಲಿ ಇನ್ನೂ ಜ್ವಲಿತವಾಗಿದೆ. ಅವರು ಯಾವಾಗಲೂ ಚಿಂತಿಸುವರು, ರಣೋತ್ಸಾಹದಿಂದ ದೇದೀಪ್ತವಾದ ವೀರರ ಮುಖವನ್ನು, ಜಯಲಕ್ಷ್ಮಿಯ ಜಯಮಾಲೆಯಿಂದಲಂಕೃತವಾದ ಉನ್ನತಕಂಠವನ್ನು, ರಣದುಂದುಭಿಯ ಸುಮಧುರ ಗಂಭೀರ ಘೋಷದಿಂದ ಅನುಪ್ರಾಣಿತವಾದ ಪ್ರಿಯ ಸಮಾಗಮವನ್ನು. ಅವರ ಆಂತರಿಕ ಕಲ್ಪನೆಗಳನ್ನು ಸಾರ್ಥಕಮಾಡದಿದ್ದರೆ ಹೋಗಲಿ, ಅದರಮೇಲೆ ಈ ನಿರಾಶೆಯ ತಣ್ಣೀರನ್ನೇಕೆ ಚಲ್ಲುವಿರಿ ?

ಯಶೋ(—ಎಷ್ಟೊಂದು ದರ್ಪ! ಹೆಂಡತಿಯಿಂದ ಈ ಅವಹೇಳನವನ್ನು ಸಹಿಸುವುದು ಯಾರಿಗೂ ಸಾಧ್ಯವಿಲ್ಲ.

ಮಹಾಮಾಯಿ—ಆದರೆ ನಿಮ್ಮ ಪರಾಜಯದಿಂದ ನನಗಾಗುವ ಅವಹೇಳನವನ್ನು ಚಿಂತಿಸುವುದಿಲ್ಲವೇ ಮಹಾರಾಜ? ನಾನು ಯಾರು? ನಿಮ್ಮ ಕೀರ್ತಿಯ ನೆರಳು ಮಾತ್ರ. ಆ ಕೀರ್ತಿ ಛೇದನದಿಂದ ನನ್ನ ಸರ್ವನಾಶವಾದಾಗ ಸಂತಾಪಾಗ್ನಿಯಿಂದ ಹೃದಯವು ಕ್ಷಣಕಾಲ ಸುಯ್ದಿದ್ದರೆ ನೀವು ಅದಕ್ಕಾಗಿ ಕಣ್ಣುಗಳನ್ನು ಕೆಂಪೇರಿಸುವಿರೇಕೆ? ಶತ್ರುವಿನಿಂದ ಸೋತುಬಂದದ್ದಾಯಿತು. ಇನ್ನು ಹೆಂಡತಿಯನ್ನಾಳಬೇಕಲ್ಲವೇ? ನಿಮ್ಮಂಥ ವೀರ ಪುರುಷರಿಗೆ ಇದು ಚೆನ್ನಾಗಿ ಶೋಭಿಸುವುದು.

ಯಶೋವಂತ—ಹಾಗಾದರೆ ನಿನ್ನಿಚ್ಛೆಯೇನು ಮಹಾಮಾಯಿ?

[ಪ್ರವೇಶ ಸೈನಿಕ]

ಸೈನಿಕ—ಪ್ರಭು, ಆಗ್ರಾದಿಂದ ಔರಂಗಜೀಬನು ಈ ಪತ್ರವನ್ನು ಕಳುಹಿಸಿರುವನು. (ಕೊಡುವನು)

ಯಶೋವಂತ—ಔರಂಗಜೀಬನ ಪತ್ರ. ಏನೆಂದು ಬರೆದಿರುವನು? (ಓದುತ್ತಾ) "ನಾನು ಅಧಿಕಾರಮಾಡುವುದು ಸಮ್ರಾಟ್ ಷಾಜಹಾನರಿಗೆ ಸಮ್ಮತ............ಅವರ ಅನುರೋಧದಿಂದಲೇ ಪತ್ರವನ್ನು ಬರೆದಿರುವೆನು. ಷೂಜನೊಡನೆ ಯುದ್ಧವು ಸಂಘಟಿಸಿವೆ"........ಆದ್ದರಿಂದ ನಾನು ಆಗ್ರಾಕ್ಕೆ ಹೋಗಬೇಕೋ?

ಮಹಾಮಾಯಿ—ಔರಂಗಜೀಬನಿಂದ ಪರಾಜಿತರಾದಿರಿ. ಈಗ ಅವನ ಆಜ್ಞೆಯನ್ನು ಪಾಲಿಸಬೇಕಲ್ಲವೆ?

ಯಶೋವಂತ—ಸುಮ್ಮನಿರು ಮಹಾಮಾಯಿ. ನಾನು ಆಗ್ರಾಕ್ಕೆ ಹೋಗುವುದು ಔರಂಗಜೀಬನ ಆಜ್ಞೆಯಿಂದಲ್ಲ. ಅವನು ಕುಹಕಿ, ವಂಚಕ. ಈ ಪತ್ರದಲ್ಲಿ ನನಗೆ ನಂಬಿಕೆ ಇಲ್ಲ. ಆದರೆ ಔರಂಗಜೀಬನು ಆಗ್ರಾದಲ್ಲಿರುವುದು ಸಾಮ್ರಾಟರಿಗೆ ಅಪಾಯ. ನಾನು ಅವರ ರಕ್ಷಣೆಗಾಗಿ ಅಲ್ಲಿಗೆ ಹೋಗುವೆನು.

ಷಾಜಹಾ೯—ನಿಲ್ಲು ಮಹಮುದ್, (ಸ್ವಲ್ಪ ಹೊತ್ತು ಚಿಂತೆ ಮಾಡಿ ರಾಜಮುಕುಟವನ್ನು ತಂದು, ಹಾಸಿಗೆಯ ಮೇಲಿದ್ದ ಖುರಾನನ್ನು ಕೈಗೆ ತೆಗೆದು ಕೊಂಡು) ನೋಡು ಮಹಮುದ್, ಇದು ನನ್ನ ಮುಕುಟ, ಇದು ನನ್ನ ಖುರಾ೯. ಈ ಖುರಾನನ್ನು ಮುಟ್ಟಿ ಶಪಥ ಮಾಡುವೆನು. ಹೊರಗೆ ನೆರೆದಿರುವ ಸಮಸ್ತ ಪ್ರಜೆಗಳ ಸಮ್ಮುಖದಲ್ಲಿ ಈ ಕಿರೀಟವನ್ನು ನಿನ್ನ ಶಿರದಲ್ಲಿ ಧರಿಸುವೆನು. ಯಾರು ಅಡ್ಡಿ ಮಾಡುವರೋ, ನೋಡುವ ? ಇಂದು ನಾನು ವೃದ್ಧನೂ, ಶೀರ್ಣನೂ, ಪಕ್ಷಗಳನ್ನು ಕಳೆದುಕೊಂಡ ಹಕ್ಕಿಯಂತೆ ಪಂಗುವೂ ಆಗಿರ ಬಹುದು. ಆದರೂ ಯಾವ ಷಾಜಹಾನನು ಈ ಭಾರತ ವರ್ಷವನ್ನು ಇಷ್ಟೊಂದು ದಿನಗಳು ಅಂಗೈಯಲ್ಲಿಟ್ಟುಕೊಂಡು ಶಾಸನಮಾಡಿದನೋ, ಆತನು ತನ್ನ ಸೈನ್ಯದ ಸಮ್ಮುಖದಲ್ಲೊಮ್ಮೆ ಮೂರ್ತಿಮತ್ತಾಗಿ ನಿಲ್ಲಬಲ್ಲ ನಾದರೆ ಅವರ ಸಮ್ಮಿಳಿತ ಅಗ್ನಿಮಯವೃಷ್ಟಿಯಿಂದ ನೂರು ಜನ ಔರಂಗ ಜೀಬರು ಭಸ್ಮೀಭೂತರಾಗಿ ಹೋಗುವರು. ಮಹಮುದ್, ನನ್ನನ್ನು ಬಿಟ್ಟು ಬಿಡು. ನೀನು ಭಾರತ ವರ್ಷದ ಅಧೀಶ್ವರನಾಗುವೆ. ನಾನು ಶಪಥ ಮಾಡುವೆನು, ಮಹಮುದ್ ; ಶಪಥ ಮಾಡುವೆನು. ಒಮ್ಮೆ ಆ ಕಪಟ ಔರಂಗಜೀಬನನ್ನು ತೋರಿಸು.

ಮಹಮುದ್—ಕ್ಷಮಿಸು, ಜಹಪನಾ.

ಷಾಜಹಾ೯—ನೋಡು. ಇದು ಮಕ್ಕಳ ಆಟವಲ್ಲ. ನಾನು – ಸ್ವಯಂ ಸಮ್ರಾಟ್ : ಷಾಜಹಾನನು ಶಪಥಮಾಡುತ್ತಿರುವೆನು. ಇದು ಉನ್ಮತ್ತನ ವ್ಯರ್ಥಾಲಾಪವಲ್ಲ. ಒಂದು ಕಡೆ ನಿಮ್ಮ ತಂದೆಯ ಆಜ್ಞೆ ; ಮತ್ತೊಂದು ಕಡೆ ಅಖಂಡ ಭಾರತ ಸಾಮ್ರಾಜ್ಯ ! ಯೋಚಿಸಿ ನೋಡು, ಮಹಮುದ್ !

ಮಹಮುದ್—ತಾತಾ, ತಂದೆಯ ಆಜ್ಞೆಯನ್ನು ಮೀರಿ ನಡೆಯುವುದು ನನ್ನಿಂದ ಸಾಧ್ಯವಿಲ್ಲ.

ಷಾಜಹಾ೯—ಒಂದು ಸಾಮ್ರಾಜ್ಯದ ಸಲುವಾಗಿಯೂ ಸಾಧ್ಯವಿಲ್ಲವೇ ?

ಮಹಮ್ಮದ್—ಸಮಗ್ರ ಪೃಥುವಿಯ ಸಲುವಾಗಿಯೂ ಸಾಧ್ಯವಿಲ್ಲ.

ಷಾಜಹಾ೯—ನೋಡು ಮಹಮುದ್, ಚನ್ನಾಗಿ ಯೋಚಿಸಿ ನೋಡು. ಭಾರತ ಸಾಮ್ರಾಜ್ಯ ಪದವಿ !

ಮುರಾದ್—ಇದಕ್ಕೆ ಪ್ರತಿಫಲವನ್ನು ಹೊಂದುವೆ, ದುಷ್ಟ. ನಾನು ನಿನ್ನನ್ನು ಮತ್ತೊಮ್ಮೆ ನೋಡುವೆನು.

ಔರಂಗಜೀಬ—ಎಳೆದುಕೊಂಡು ಹೋಗಿ. (ಹೋದರು.)

ಔರಂಗಜೀಬ—ಹಾ! ದೇವರೇ, ನನ್ನ ಕೈ ಹಿಡಿದು ಎಲ್ಲಿಗೆ ಕರೆದೊಯ್ಯುವೆ? ನಾನೀ ಸಿಂಹಾಸನವನ್ನು ಅಪೇಕ್ಷಿಸಲಿಲ್ಲ. ನೀನು ನನ್ನ ಕೈಹಿಡಿದು ಅದರಮೇಲೆ ಕುಳ್ಳಿರಿಸುವೆಯೇಕೆ? ಅದು ನಿನಗೇ ಗೊತ್ತು.

(ಪ್ರವೇಶ ದಿಲ್ದಾರ್)

ದಿಲ್ದಾರ್—ಜಹಾಪನಾ, ಮನುಷ್ಯನಿಗೆ ತಿಳಿದ ವಿಚಾರದಲ್ಲಿ ದೇವರನ್ನೇಕೆ ಪ್ರಶ್ನೆ ಮಾಡುವುದು?

ಔರಂಗಜೀಬ—ಏಕೆ; ದಿಲ್ದಾರ್? ನಿನ್ನ ಮಾತಿನಲ್ಲೇನೋ ಗೂಢ ಅಭಿಪ್ರಾಯವಿದೆ.

ದಿಲ್ದಾರ್—ಅಂತಹುದೇನೂ ಇಲ್ಲ. ದೇವರು ಮನುಷ್ಯನಿಗೆ ಬುದ್ಧಿಶಕ್ತಿಯನ್ನು ಕೊಟ್ಟಿರುವನು. ವಿವೇಚನೆಯಿಂದ ತರ್ಕಿಸಿ ತಾನೇ ಸಾಧಿಸಬಲ್ಲ ಕಾರ್ಯದಲ್ಲಿ ಪುನಃ ದೇವರನ್ನು ತಂದುಹಾಕಲೇಕೆ ಎಂದು ತೋರಿತು.

ಔರಂಗಜೀಬ—ಹಾಗಾದರೆ ಸಾಮ್ರಾಜ್ಯಲೋಭದಿಂದ ನಾನಿದೆಲ್ಲವನ್ನೂ ಮಾಡುತ್ತಿರುವೆನೆಂದು ತಿಳಿದೆಯ.

ದಿಲ್ದಾರ್—ನಾನು ಹಾಗೆ ತಿಳಿದಿಲ್ಲ ಪ್ರಭು. ಪ್ರಪಂಚವು ಹಾಗೆ ತಿಳಿಯುವುದು. ಕೊನೆಗೆ ನೀವೂ ಅದನ್ನು ನಂಬುವಿರಿ.

ಔರಂಗಜೀಬ—ಧೂರ್ತ, ನಿನ್ನನ್ನೂ ಮುರಾದನ ಸಂಗಡ ಖೈದು ಮಾಡಬೇಕಾಗಿತ್ತು.

ದಿಲ್ದಾರ್—ಅದೇಕೆ, ಷಹಜಾದಾ? ಅಂಥಾ ಭಯವೇನೂ ಇಲ್ಲವೆಂದು ನಾನು ಮೊದಲೇ ಹೇಳಲಿಲ್ಲವೆ? ಈ ಕುಟಿಲ ತಂತ್ರವನ್ನು ಎದುರಿಸುವ ಯೋಚನೆಯು ನನಗಿದ್ದಿದ್ದರೆ ಮುರಾದನು ಆಗಲೇ ಮಯೂರಾಸನದಲ್ಲಿ ಕೂಡುತ್ತಿದ್ದನು.

ಔರಂಗಜೀಬ—ಔರಂಗಜೀಬನ ಸಮ್ಮುಖದಲ್ಲಿಯೂ ನಿನಗಿಷ್ಟೊಂದು ನಿರ್ಭಯವೇ? ಹಾಗಿದ್ದರೆ ನಿನ್ನ ಅಭಿಮತವೇನು?

ದಿಲ್ದಾರ್—ವಿನೋದ! ಮನುಷ್ಯನ ಬುದ್ಧಿಬಲದಲ್ಲಿ ನನಗೆ ಬಹಳ ಭಕ್ತಿ, ಷಹಜಾದಾ. ನೀವು ನಾಲ್ಕು ಮಂದಿ ಸಹೋದರರು. ನಿಮ್ಮೆಲ್ಲಾರ ಬುದ್ಧಿಶಕ್ತಿಯು ಹೆಚ್ಚೆಂಬುದನ್ನು ಒಂದುಸಾರಿ ನೋಡಬೇಕೆಂಬ ಆಸೆ ನನಗೆ. ಅದರಿಂದ ವಿನೋದವು ದೊರಕುವುದು. ನನ್ನ ವಿದೂಷಕ ವೃತ್ತಿಯೂ ಸಾರ್ಥಕವಾಗುವುದು.

ಔರಂಗಜೇಬ—ಬೆಂಕಿಯೊಡನೆ ಆಟವೇ ನಿನಗೆ?

ದಿಲ್ದಾರ್—ಈಗ ನೋಡಿರಿ, ನೀವು ನಾಲ್ಕು ಮಂದಿಯೂ ಒಬ್ಬ ತಂದೆಯ ಮಕ್ಕಳು. ಎಲ್ಲರೂ ತಂದೆಯಂತೆ ವೀರಪುರುಷರು. ಆದರೆ ನಿಮ್ಮ ಬುದ್ಧಿಯು ಬೇರೆ ಬೇರೆ ದಾರಿಗಳಲ್ಲಿ ಪ್ರವಹಿಸುತ್ತಿರುವುದರಿಂದ ಎಂತಹ ಕ್ರಾಂತಿಯು ಪ್ರಾರಂಭವಾಗಿದೆ! ದಾರನಿಗೆ ಧರ್ಮವು ಬೇಕು.

ಔರಂಗಜೇಬ—ಅವನು ಕಾಫರ್!

ದಿಲ್ದಾರ್—ಅವನು ಪ್ರತಿಯೊಂದು ಕಾರ್ಯವನ್ನೂ ಕರ್ತವ್ಯದೃಷ್ಟಿಯಿಂದ ಯೋಚಿಸತಕ್ಕವನು.

ಔರಂಗಜೇಬ—ನೀನೇನು ದಾರನ ಕಡೆಯವನೇ?

ದಿಲ್ದಾರ್—ಎಂದಿಗೂ ಅಲ್ಲ. ರಾಜನೀತಿಗೆ ಅಷ್ಟೊಂದು ಧರ್ಮ ಮತ್ತು ಕರ್ತವ್ಯನಿಷ್ಠೆಯು ಅಗತ್ಯವಿದೆಯೇ ಎಂದು ನನಗೆ ಸಂದೇಹ. ಇನ್ನು ಷೂಜಾ. ಅನಾಯಾಸವಾಗಿ ಏನಾದರೂ ದೊರೆತರೆ ನನಗೂ ಇರಲಿ ಎನ್ನುವ ಆಲಸ್ಯ ಪ್ರಕೃತಿ ಅವನದು. ಅವನಿಗೆ ಹೇಗೆ ಜಯಲಾಭವಾಗುವುದು? ಸೋತು ಪಲಾಯನ ಮಾಡುವನು. ಮುರಾದನು ಮೂರ್ಖ! ಅದರ ಫಲವನ್ನು ನೀವೇ ದೊರಕಿಸಿದಿರಿ. ಧರ್ಮ, ಕರ್ತವ್ಯ, ಸಾಹಸ, ಆಲಸ್ಯ, ಮೌಢ್ಯ ಇವೊಂದೂ ಉಪಯೋಗವಿಲ್ಲ. ಹಾಗಾದರೆ ಸಾಮ್ರಾಟನಾಗಲು ಇರಬೇಕಾದ ಗುಣಗಳೇನು?

ಔರಂಗಜೇಬ—ನನ್ನ ಗುಣಗಳನ್ನೇಕೆ ವಿಮರ್ಶಿಸಲಿಲ್ಲ, ದಿಲ್ದಾರ್?

ದಿಲ್ದಾರ್—ನನಗಿನ್ನೂ ಅದರ ಪರಿಚಯವಾಗಿಲ್ಲ. ಷಹಜಾದಾ!

ಔರಂಗಜೇಬ—ಆಗುವುದು. ನೀನೂ ಒಂದು ದಿನ ಔರಂಗಜೇಬನ ಪರಿಚಯವನ್ನು ಪಡೆಯುವೆ!

ತಂದೆಯು ಮಯೂರಾಸನದಲ್ಲಿ ಕುಳಿತು ದಾರನನ್ನು ಸೋಲಿಸಿಬಂದ ಸೇನಾಧ್ಯಕ್ಷರನ್ನು ಸನ್ಮಾನಿಸುವನು.

ಮಹಮುದ್—ತಾತನು ಜೀವಿಸಿರುವಾಗ ತಂದೆಯು ಮಯೂರಾಸನವನ್ನೇರುವುದು ! ಇದು ನಿಜವೇ ?

ದಿಲ್ದಾರ್—ನಿಜ, ಮಹಮುದ್. ಹಾಗಲ್ಲದಿದ್ದರೆ ಸಾಮ್ರಾಟ್ ಷಾಜಹಾನನನ್ನು ದುರ್ಗಪ್ರಾಸಾದದಲ್ಲಿ ಬಂದಿಯಾಗಿ ಮಾಡಿದುದು ನಿನ್ನ ವಿನೋದಕ್ಕೆಂದು ತಿಳಿದೆಯ ?

ಮಹಮುದ್—ದಾರನ ಪಕ್ಷದವರು ತಾತನನ್ನು ನೋಡಲು ಅವಕಾಶ ಕೊಡದಿರುವುದೇ ಬಂಧನದ ಉದ್ದೇಶವೆಂದು ತಂದೆಯು ಹೇಳಿದನು. ನಾನದನ್ನು ನಂಬಿದೆನು.

ದಿಲ್ದಾರ್—ಒಳ್ಳೆ ಸರಳಸ್ವಭಾವದ ಯುವಕನು ನೀನು. ದಾರನ ಪರಾಜಯ, ಷೂಜನ ಹಿಂಸೆ, ಮುರಾದನ ಬಂಧನ – ಇವೆಲ್ಲಾ ತಂದೆಯ ಸಂದರ್ಶನ ಸುಖದಿಂದ ಅವರನ್ನು ವಂಚಿಸುವುದಕ್ಕಾಗಿ ಎಂದು ಭಾವಿಸಿದೆಯಾ? ಆ ಅಲ್ಪ ಪ್ರಯೋಜನಕ್ಕಾಗಿ ನಿಮ್ಮ ತಂದೆಯು ಈ ಭ್ರಾತೃ ಹಿಂಸೆಗೆ ಮತ್ತು ಗುರುಪೀಡೆಗೆ ಕೈ ಹಾಕಿದನೆ ?

ಮಹಮುದ್—ಭ್ರಾತೃಹಿಂಸೆ ! ಗುರುಪೀಡೆ !.... ದಿಲ್ದಾರ್, ನನ್ನ ಮನಸ್ಸಿನ ಸಂದೇಹಾಗ್ನಿಯನ್ನು ಊದಿ ಉರಿಮಾಡುವೆಯಾ ? ಆ ದಿನ ತಂದೆಯ ನಿರೋಧದಿಂದ ದುರ್ಗಪ್ರಾಸಾದವನ್ನು ಪ್ರವೇಶಿಸಿ, ತಾತನನ್ನು ಖೈದುಮಾಡಿದ ಮೊದಲು ನನ್ನ ಹೃದಯದಲ್ಲೊಂದು ಅನುತಾಪದ ಬಿರುಗಾಳಿಯೆದ್ದು ನನ್ನ ಪಿತೃಭಕ್ತಿಯ ಸ್ಥಿರದೀಪವನ್ನು ನಂದಿಸುವ ಪ್ರಯತ್ನದಲ್ಲಿರುವುದು. ನೀನೇಕೆ ಅದರ ಆವೇಗವನ್ನು ಮತ್ತಷ್ಟು ಹೆಚ್ಚಿಸುವೆ. ದಿಲ್ದಾರ್?

ದಿಲ್ದಾರ್—ಕ್ಷಣಕಾಲ ತನ್ನನ್ನು ಬಂದು ನೋಡಿಹೋಗುವಂತೆ ಪ್ರತಿನಿತ್ಯವೂ ಸಮ್ರಾಟ್ ಷಾಜಹಾನನು ನಿನ್ನ ತಂದೆಗೆ ಹೇಳಿಕಳುಹಿಸುತ್ತಿರುವನು. ಮಗನನ್ನೊಂದು ಸಾರಿ ನೋಡಲು ತಂದೆಯ ಹೃದಯವು ಕಾತರಗೊಂಡಿರುವುದು. ಆದರೆ ಮಗನಿಗೆ ತಂದೆಯ ಮುಂದೆ ತಲೆಯೆತ್ತಿ ನಿಲ್ಲುವ ಧೈರ್ಯವಿಲ್ಲ. ಆಹಾ ! ದುರಾಶಾಮಯನಾದ ಮಾನವ ಜೀವನವೇ, ಪ್ರಪಂಚದ ನಿಂದೆಗಿಂತ ನನ್ನ ಹೃದಯದ ಅಂಧಕಾರವು ಹೆಚ್ಚು ದುರ್ಭರವಾದುದಲ್ಲವೆ ?

ಮಹಮುದ್—ಸಾಕುಮಾಡು, ದಿಲ್ದಾರ್. ನನ್ನನ್ನು ಹಿಂಸಿಸುವುದಕ್ಕಾಗಿಯೇ ನೀನು ಚಿಕ್ಕಪ್ಪನನ್ನು ತೊರೆದು ತಂದೆಯನ್ನು ಆಶ್ರಯಿಸಿದೆಯ? ಅಯ್ಯೋ! ನನ್ನ ಮನಸ್ಸಿನ ಸಂದೇಹವನ್ನು ಪರಿಹರಿಸುವವರಾರೂ ಇಲ್ಲವೆ? ಈ ಸಂದಿಗ್ಧಾವಸರದಲ್ಲಿ ನನ್ನ ಕರ್ತವ್ಯವೇನು? ಪಿತೃಭಕ್ತಿಯೋ? ಪಿತೃದ್ವೇಷವೋ?

(ಸೀಸಪದ್ಯ)

ಪಿತನಾಜ್ಞೆಯನು ಶಿರದೆ ತಳೆದು ಪಾಲಿಸುವೆನೇ?
ನೀತಿಬಾಹಿರನೆಂದು ಜನರಳಿವರು.

ದಿಲ್ದಾರ್—ತಂದೆಯ ಆಜ್ಞೆಯ ನೆವದಿಂದ ಸ್ವಬುದ್ಧಿಯನ್ನು ಕಳೆದು ಕೊಳ್ಳುವುದು ಮಾನವನ ಲಕ್ಷಣವಲ್ಲ. ಪಿತನು ಮಗನಿಗೆ ಪೂಜ್ಯನು ದಿಟ. ಆದರೆ ನಿನ್ನ ಆತ್ಮವು ಪಿತನಿಗಿಂತ ದೊಡ್ಡದೆಂಬುದನ್ನು ಮರೆಯಬೇಡ, ಮಹಮುದ್.

ಮಹಮುದ್—ರಾಜ್ಯಲೋಭದೆ ಆತ್ಮವಂಚಕನಾಗುವೆನೆ?
ಪಾಪಭೀತಿಯು ಮನದೆ ಪ್ರಜ್ವಲಿಪುದು.

ದಿಲ್ದಾರ್—ಪಾಪಕ್ಕಾಗಿ ಹೆದರುವವರು ಪುಣ್ಯದ ದಾರಿಯನ್ನು ಜಾಗ್ರತೆ ಹಿಡಿದಂತೆಯೆ? ಪ್ರೇಮಶೀಲನಾದ ನಿನ್ನ ವೃದ್ಧ ತಾತನ ವಿಷಯದಲ್ಲಿ ನೀನೆಂತಹ ಪಾಪಾಚರಣೆಯನ್ನು ಮಾಡಿದೆ.

ಮಹಮುದ್—ತಾತನನು ಬಂಧನದೆ ಬಿಡಿಸಿ ಕ್ಷಮೆ ಬೇಡುವೆನೆ?
ಬಳಿಕ ಕಾರಾಗೃಹವೆ ವಾಸಮೆನಗೆ.

ದಿಲ್ದಾರ್—ಸೆರೆಮನೆಗೆ ಭಯಪಟ್ಟು ಮನಸ್ಸಾಕ್ಷಿಗೆ ವಿರೋಧವಾಗಿ ನಡೆಯುವೆಯ? ದೇಶದ ಇಂದಿನ ಅಶಾಂತಿಪರಿಸ್ಥಿತಿಯಲ್ಲಿ ನಿರಪರಾಧಿಗಳಾದ ಸಾವಿರಾರು ಮಂದಿ ವೀರಪುರುಷರು, ವೀರಾಂಗನೆಯರು ಆನಂದದಿಂದ ಕಾರಾಗೃಹಕ್ಕೆ ಹೋಗುತ್ತಿಲ್ಲವೆ? ವೀರನಾದ ನೀನು ಕಾರಾಗೃಹಕ್ಕೆ ಬೆದರಿ ಕರ್ತವ್ಯಭ್ರಷ್ಟನಾಗುವೆಯ? ನೋಡು, ಇಂದು ನ್ಯಾಯಾನ್ಯಾಯಗಳ ಹೋರಾಟ. ಅವೆರಡರಲ್ಲಿ ನೀನು ಯಾವುದರ ಪಕ್ಷವನ್ನು ವಹಿಸುವೆ?

ಮಹಮ್ಮದ್—ಪ್ರತಿಭಟಿಸಿ ಜನಕನನು ವೈರಿಗಳ ಸೇರುವೆನೆ?
ಪಿತೃಭಕ್ತಿಯೆಲ್ಲವು ವ್ಯರ್ಥವಹುದು.

ನಾದಿರಾ—ಸುಲೇಮಾನನ ಸಮಾಚಾರವೇನಾದರೂ ತಿಳಿಯಿತೆ ?

ದಾರಾ—ತಿಳಿಯಿತು. ಮಹಾರಾಜ ಜಯಸಿಂಹನು ಸುಲೇಮಾನನನ್ನು ತ್ಯಾಗಮಾಡಿ ಸೈನ್ಯದೊಡನೆ ಔರಂಗಜೇಬನ ಪಕ್ಷ ವಹಿಸಿದನಂತೆ. ನಿರ್ಭಾಗ್ಯ ಕುಮಾರನು ಉಳಿದ ಅಲ್ಪ ಸ್ವಲ್ಪ ಸೈನ್ಯವನ್ನು ತೆಗೆದುಕೊಂಡು ಹರಿದ್ವಾರದ ಮಾರ್ಗವಾಗಿ ನನ್ನ ಸಹಾಯಕ್ಕೆ ಬರುತ್ತಿದ್ದಾಗ ಔರಂಗಜೇಬನ ಸೈನ್ಯವು ಅವನನ್ನು ಶ್ರೀನಗರದ ಕಡೆಗೆ ಓಡಿಸಿತಂತೆ. ಈಗ ಸುಲೇಮಾನನು ಶ್ರೀನಗರದ ಪೃಥ್ವಿಸಿಂಹನ ಮನೆಯ ಬಾಗಿಲಲ್ಲಿ ಭಿಕ್ಷುಕ .... ಏಕೆ ನಾದಿರಾ ? ಅಳುತ್ತಿರುವೆ ?

ನಾದಿರಾ—(ಕಣ್ಣೊರೆಸಿಕೊಂಡು) ಇಲ್ಲ ಪ್ರಭು.

ದಾರಾ—ಸ್ವಲ್ಪ ಸಮಾಧಾನ ಹೊಂದು ನಾದಿರಾ .... ಹಾ ! ನನಗೆ ಅಳುವುದೂ ಸಾಧ್ಯವಿಲ್ಲ.

ನಾದಿರಾ—ಮತ್ತೊಂದು ಸಾರಿ ಔರಂಗಜೇಬನೊಡನೆ ಯುದ್ಧ ಮಾಡುವಿರಾ, ಪ್ರಭು ?

ದಾರಾ—ಮಾಡುವೆನು. ಈ ದೇಹದಲ್ಲಿ ಪ್ರಾಣಸಂಚಾರವಿರುವವರೆಗೆ ನಾನು ಔರಂಗಜೇಬನ ಪ್ರಭುತ್ವವನ್ನು ಸ್ವೀಕರಿಸುವುದಿಲ್ಲ. ಅವನು ನನ್ನ ವೃದ್ಧ ತಂದೆಯನ್ನು ಕಾರಾಗೃಹದಲ್ಲಿ ಬಂಧಿಸಿ ಸಿಂಹಾಸನವನ್ನು ಆಕ್ರಮಿಸಿಕೊಂಡಿರುವನು. ತಂದೆಯನ್ನು ಬಂಧವಿಮುಕ್ತನಾಗಿ ಮಾಡುವವರೆಗೆ ನಾನು ಯುದ್ಧದಿಂದ ನಿವೃತ್ತನಾಗುವುದಿಲ್ಲ. ಏಕೆ, ನಾದಿರಾ ? ತಲೆಯನ್ನಾಡಿಸುವೆ? ನನ್ನ ಸಂಕಲ್ಪವು ನಿನಗೆ ಅಸಮ್ಮತವೆ ?

ನಾದಿರಾ—ಇಲ್ಲ ಪ್ರಭು. ನಿಮ್ಮ ಇಚ್ಛೆಯೇ ನನ್ನ ಇಚ್ಛೆ, ಆದರೆ-

ದಾರಾ—ಆದರೇನು?

ನಾದಿರಾ—ಪ್ರತಿದಿನವೂ ಈ ಭಯ, ಈ ಪ್ರವಾಸ, ಈ ಪಲಾಯನವೇಕೆ ?

ದಾರಾ—ಏನು ಮಾಡುವುದು, ನಾದಿರಾ ? ನನ್ನ ಸಂಗಡ ಬಂದಮೇಲೆ ಎಲ್ಲವನ್ನೂ ಸಹಿಸಲೇಬೇಕು.

ನಾದಿರಾ—ನನಗೋಸ್ಕರ ಹೇಳುತ್ತಿಲ್ಲ ಪ್ರಭು. ನಿಮಗೋಸ್ಕರವಾಗಿಯೇ ಹೇಳುತ್ತಿರುವೆನು. ಒಂದುಸಾರಿ ಕನ್ನಡಿಯಲ್ಲಿ ನಿಮ್ಮ ಮುಖವನ್ನು ನೋಡಿ

(ಪ್ರವೇಶ ಜಹರತ್)

ಜಹರತ್—ಇದೇನಮ್ಮ, ಅಳುತ್ತಿರುವೆ? ಸಿಪಾರ್, ನೀನೂ ಸಹ ಅಳುತ್ತಿರುವೆ.

ನಾದಿರಾ—ಇಲ್ಲಿ ಜಹರತ್. ನಾವು ಅಳುತ್ತಿಲ್ಲ.

ಜಹರತ್—ಅಮ್ಮ, ನೀನು ಅತ್ತುದನ್ನು ನಾನು ಯಾವಾಗಲೂ ನೋಡಿಲ್ಲ. ಬೆಳದಿಂಗಳಂತೆ ಕಾರ್ಗತ್ತಲನ್ನು ಬೆಳಗುಮಾಡುವ ನಿನ್ನ ಉಜ್ವಲವಾದ ನಗುವು ಇಂದೆಲ್ಲಿ ಅದೃಶ್ಯವಾಯಿತು? ಅನ್ನವಿಲ್ಲದೆ, ನಿದ್ರೆಯಿಲ್ಲದೆ, ದಾರಿಯ ಮರದ ನೆರಳಲ್ಲಿ ಕುಳಿತಿರುವಾಗಲೂ ಆಪತ್ಕಾಲದ ಬಂಧುವಿನಂತೆ ನಿನ್ನ ತುಟಿಗಳಲ್ಲಿ ಆ ನಗುವು ಕಾಣಿಸುತ್ತಿತ್ತು. ಈಗ ಅದೆಲ್ಲಿ ಮರೆಯಾಯಿತಮ್ಮ?

ನಾದಿರಾ—ಏನು ಹೇಳಲಿ, ಜಹರತ್. ಇಂದು ನನ್ನ ದೈವವು ನನ್ನನ್ನು ಕೈ ಬಿಟ್ಟಿತು. ನನ್ನ ಸ್ವಾಮಿಯು ನನ್ನನ್ನು ತ್ಯಜಿಸಿದನು.

(ಪ್ರವೇಶ ದಾರಾ)

ದಾರಾ—ನನ್ನನ್ನು ಕ್ಷಮಿಸು, ನಾದಿರಾ. ಹೊರಗೆ ಹೋದಮೇಲೆ ನಾನು ಎಷ್ಟು ಕಠಿಣವಾಗಿ ನಡೆದೆನೆಂಬುದನ್ನು ತಿಳಿದುಕೊಂಡೆನು.

ನಾದಿರಾ—(ನಿರುತ್ತರಳಾಗಿ ರೋಧಿಸುವಳು.)

ದಾರಾ—ನಾನು ನನ್ನ ಅಪರಾಧವನ್ನು ಒಪ್ಪಿಕೊಂಡು ಕೈಜೋಡಿಸಿ ನಿನ್ನ ಕ್ಷಮೆಯನ್ನು ಬೇಡುತ್ತಿರುವೆನು. ಆದರೂ ನೀನು ........ಛೀ! ನಾದಿರಾ, ನನ್ನ ಹೃದಯದಲ್ಲಿ ದಿವಾರಾತ್ರಿ ಎಂತಹ ಜ್ವಾಲೆಯು ಹತ್ತಿ ಉರಿಯುತ್ತಿದೆಯೆಂಬುದನ್ನು ತಿಳಿದಿದ್ದ ಪಕ್ಷದಲ್ಲಿ ನನ್ನ ಈ ಅಲ್ಪ ಅಪರಾಧವನ್ನು ನೀನು ಪರಿಗಣಿಸುತ್ತಿರಲಿಲ್ಲ.

ನಾದಿರಾ—ಪ್ರಭು, ನಾನು ನಿಮ್ಮನ್ನು ಎಷ್ಟೆಂದು ಪ್ರೀತಿಸುವೆನೆಂಬುದನ್ನು ತಿಳಿದಿದ್ದ ಪಕ್ಷದಲ್ಲಿ ನನ್ನಲ್ಲಿ ನೀವೆಂದಿಗೂ ಕಠಿಣರಾಗಿ ವರ್ತಿಸುತ್ತಿರಲಿಲ್ಲ.

ಸಿಪಾರ್—ಅಪ್ಪ, ನೀನು ಅಮ್ಮನ ಮೇಲೆ ಏಕೆ ಸಿಟ್ಟು ಮಾಡುವೆ!

ನಾದಿರಾ—ಇಲ್ಲ ಮಗು. ನಿಮ್ಮ ತಂದೆಯವರು ನನ್ನ ಮೇಲೆ ಸಿಟ್ಟು ಮಾಡಲಿಲ್ಲ. ನಾನೇ ಹಿಂದುಮುಂದರಿಯದೆ ಮಾತಾಡಿದೆನು. ತಪ್ಪೆಲ್ಲವೂ ನನ್ನದು.

(ಪ್ರವೇಶ ದಾಸಿ)

ದಾಸಿ—ಹೊರಗೆ ಯಾರೋ ತಮ್ಮನ್ನು ನೋಡಲಪೇಕ್ಷಿಸುವರು.

ದಾರಾ—ಯಾರವರು ?

ದಾಸಿ—ಗುಜರಾತಿನ ಸುಬಾದಾರರಂತೆ.

ದಾರಾ—ಸುಬಾದಾರರು ನನ್ನನ್ನು ನೋಡಲು ಬಂದಿರುವರೇ? ಸಿಪಾರ್, ನೀನು ಹೋಗಿ ಸುಬಾದಾರರನ್ನು ಕರೆದುಕೊಂಡು ಬಾ.

(ನಾದಿರಾ ಮತ್ತು ಜಹರತ್ ಮನೆಯೊಳಗೆ ಹೋಗುವರು. ಸಿಪಾರ್ ಮತ್ತು ದಾಸಿಯು ಮತ್ತೊಂದು ಕಡೆ ಹೋಗುವರು)

ದಾರಾ—ಗುಜರಾತಿನ ಸುಬಾದಾರ್. ಔರಂಗಜೇಬಿನ ಮಾವ. ನೋಡುವೆನು. ಸಹಾಯವೇನಾದರೂ ಸಿಗುವುದೋ ಏನೋ ?

(ಪ್ರವೇಶ ಷಹನಾರಾಜ್ ಮತ್ತು ಸಿಪಾರ್)

ಷಹನಾರಾಜ್—ಬಂದಗಿ, ಯುವರಾಜಾ.

ದಾರಾ—ಬಂದಗಿ ಸುಲ್ತಾನ್ ಸಾಹೇಬ.

ಷಹನಾರಾಜ್—ಷಹಜಾದರಿಗೆ ನನ್ನ ನೆನಪಿದೆಯೆ ?

ದಾರಾ—ಇದೆ, ಸುಲ್ತಾನ್ ಸಾಹೇಬ್. ನಾನು ಹಿಂದೆ ತಮ್ಮನ್ನು ನೋಡಿರುವೆನು.

ಷಹನಾರಾಜ್—ಈಗ ತಮ್ಮ ಆಜ್ಞೆಯೇನು, ಯುವರಾಜ ?

ದಾರಾ—ಆಜ್ಞೆ ! ನಾನು ಆಜ್ಞೆ ಮಾಡುವ ದಿನಗಳು ಕಳೆದುಹೋದುವು. ಈಗ ಆಜ್ಞೆ ಮಾಡುವವನು ಔರಂಗಜೇಬನು.

ಷಹನಾರಾಜ್—ಏನು ? ಔರಂಗಜೇಬನೇ. ಅವನ ಆಜ್ಞೆಯನ್ನು ನಾನು ಪರಿಗಣಿಸುವುದಿಲ್ಲ.

ದಾರಾ—ಅದೇನು ! ಔರಂಗಜೇಬನು ಇಂದು ಭಾರತ ಸಮ್ರಾಟ್.

ಷಹನಾರಾಜ್—ಸಮ್ರಾಟನೆ? ಯಾವನು ಸ್ವಾರ್ಥತ್ಯಾಗದ ಹೆಸರಿನಿಂದ ತನ್ನ ವೃದ್ಧ ಪಿತನ ವಿರುದ್ಧ ವಿದ್ರೋಹಮಾಡಿದನೋ, ಸ್ನೇಹದ ಹೆಸರಿನಿಂದ ಸಹೋದರನ ಸೆರೆ ಹಿಡಿದನೋ, ಧರ್ಮದ ಹೆಸರಿನಿಂದ ಸಿಂಹಾಸನವನ್ನಾಕ್ರಮಿಸಿದನೋ ಅವನು ಸಮ್ರಾಟನೆ ? ಹಾದಿಯ ಭಿಕ್ಷುಕನೊಬ್ಬನನ್ನು ಸಿಂಹಾಸನದ

ಮೇಲೆ ಕುಳ್ಳಿರಿಸಿ ನಾನು ಅಭಿವಾದನ ಮಾಡಬಲ್ಲೆ. ಆದರೆ ಔರಂಗಜೀಬನಿಗೆ ಮಾತ್ರ ಮಾಡಲಾರೆ.

ದಾರಾ—ಇದೇನು, ಸುಲ್ತಾನ್. ಔರಂಗಜೀಬನು ನಿನ್ನ ಅಳಿಯನಲ್ಲವೆ ?

ಷಹನಾರಾಜ್—ಔರಂಗಜೀಬನು ನನ್ನ ಅಳಿಯನಾಗಿರದೆ ಪುತ್ರನಾಗಿದ್ದು, ಹಾಗೂ ಆ ಪುತ್ರನು ನನ್ನ ಏಕಮಾತ್ರ ಸಂತಾನವಾಗಿದ್ದರೂ ನಾನು ಅವನೊಡನೆ ಎಲ್ಲಾ ಸಂಬಂಧವನ್ನು ತ್ಯಜಿಸಿಬಿಡುತ್ತಿದ್ದೆನು. ಅಧರ್ಮವನ್ನು ನಾನೆಂದಿಗೂ ಸಹಿಸತಕ್ಕವನಲ್ಲ.

ದಾರಾ—ಹಾಗಾದರೆ ಈಗೇನು ಮಾಡಲು, ನಿಶ್ಚೈಸಿರುವಿರಿ ?

ಷಹನಾರಾಜ್—ಯುವರಾಜ ದಾರನ ಪಕ್ಷವಹಿಸಿ ಯುದ್ಧ ಮಾಡುವೆನು. ಮೊದಲಿನಿಂದ ಅನಕ್ರೋಶಸ್ಕರವಾಗಿ ಸಿದ್ಧನಾಗಿಯೇ ಇರುವೆನು. ನನ್ನೀ ಅಲ್ಪ ಸೈನ್ಯದಿಂದ ಔರಂಗಜೀಬನನ್ನು ಎದುರಿಸುವುದು ಅಸಂಭವ. ಆದ್ದರಿಂದ ಹೆಚ್ಚಿಗೆ ಸೈನ್ಯವನ್ನು ಸಂಗ್ರಹಿಸುತ್ತಿರುವೆನು.

ದಾರಾ—ಅದು ಹೇಗೆ ?

ಷಹನಾರಾಜ್—ಮಹಾರಾಜ ಯಶೋವಂತಸಿಂಹನಿಗೆ ಸಹಾಯಕೆ ಬರುವಂತೆ ಹೇಳಿ ಕಳುಹಿಸಿರುವೆನು.

ದಾರಾ—ಮಹಾರಾಜನು ಅದಕ್ಕೆ ಸಮ್ಮತಿಸಿರುವನೆ ?

ಷಹನಾರಾಜ್—ಸಮ್ಮತಿಸಿರುವನು. ಏನೂ ಭಯವಿಲ್ಲ, ಷಹಜಾದಾ. ಬಾ, ನೀನಿಂದು ನನ್ನ ಅತಿಥಿ. ನಮ್ಮ ಸಮ್ರಾಟರ ಜ್ಯೇಷ್ಠ ಪುತ್ರ. ಆತನೊಪ್ಪಿದ ಭಾವೀ ಸಮ್ರಾಟ್. ನಾನೊಬ್ಬ ವೃದ್ಧನಾದ ರಾಜಭಕ್ತ ಪ್ರಜಾಸಾಮಾನ್ಯನು. ವೃದ್ಧ ಸಮ್ರಾಟನ ಸಲುವಾಗಿ ಯುದ್ಧ ಮಾಡುವೆನು. ಜಯಲಾಭವಾಗದೆ ಹೋದರೆ ಯುದ್ಧದಲ್ಲಿ ಪ್ರಾಣವನ್ನಾದರೂ ಕೊಡುವೆನು. ಮುದುಕನಾದೆ. ಈಗಲಾದರೂ ಸ್ವಲ್ಪ ಪುಣ್ಯ ಗಳಿಸಿಕೊಂಡರೆ ಒಳ್ಳೇದಲ್ಲವೆ ?

ದಾರಾ—ಹಾಗಾದರೆ ನೀವು ನನಗೆ ಆಶ್ರಯ ಕೊಡುವಿರಾ ?

ಷಹನಾರಾಜ್—ಆಶ್ರಯವೇ, ಯುವರಾಜಾ. ನನ್ನ ಮನೆಯು ತಮ್ಮದು. ನಾನು ತಮ್ಮ ಭೃತ್ಯ.

ಸಿಪಾರ್—ನೋಡುತ್ತಿರುವೆನು, ಅಕ್ಕ. ಆದರೆ ಉಪಾಯವೇನು ?

ಜಹರತ್—ಉಪಾಯವೇನು ? ನೀನು ಗಂಡಸು. ಸ್ಥಿತಿಕಂಠದಿಂದ ಉಪಾಯವೇನೆಂದು ಕೇಳುತ್ತಿರುವೆಯಲ್ಲವೆ ? ನಾನು ಗಂಡಸಾಗಿದ್ದರೆ ಉಪಾಯವನ್ನು ಹುಡುಕುತ್ತಿದ್ದೆ.

ಸಿಪಾರ್—ಏನು ಉಪಾಯವಿದೆ, ಅಕ್ಕ ?

ಜಹರತ್—(ಉಡಿಯಿಂದ ಕಠಾರಿಯನ್ನು ತೆಗೆದು) ಈ ಕಠಾರಿಯನ್ನು ಆ ನೀಚ ಔರಂಗಜೀಬನ ಎದೆಯಲ್ಲಿ ಇರಿದು ಬರುತ್ತಿದ್ದೆ.

ಸಿಪಾರ್—ಏನು ! ಕೊಲ್ಲುವುದೇ ?

ಜಹರತ್—ಹೌದು, ಹತ್ಯೆ.

ಸಿಪಾರ್—(ಬೆಚ್ಚಿಬೀಳುವನು)

ಜಹರತ್—ಬೆಚ್ಚುವೆಯೇಕೆ ? ಸಿಪಾರ್, ತೆಗೆದುಕೋ ಈ ಕಠಾರಿಯನ್ನು. ಡಿಲ್ಲಿಗೆ ಹೋಗು. ನೀನು ಹುಡುಗ. ನಿನ್ನ ಮೇಲೆ ಯಾರೂ ಸಂದೇಹ ಪಡುವುದಿಲ್ಲ. ಔರಂಗಜೀಬನ ಆಸ್ಥಾನವನ್ನು ಪ್ರವೇಶಿಸಿ ಅವನ ಪಾಪಕ್ಕೆ ತಕ್ಕ ಪ್ರಾಯಶ್ಚಿತ್ತ ಮಾಡು.

ಸಿಪಾರ್—ಇಲ್ಲ. ಅಕ್ಕ ಈ ಕೊಲೆಯು ನನ್ನಿಂದಾಗುವುದಿಲ್ಲ.

ಜಹರತ್—ಛೀ ! ಹೇಡಿ. ತಾಯಿಯು ಸಾಯುತ್ತಿರುವಳು. ತಂದೆಯು ದಿನೇ ದಿನೇ ಕ್ಷೀಣನಾಗುತ್ತಿರುವನು. ಹೆಚ್ಚು ದಿನ ಉಳಿಯುವ ಆಸೆ ಇಲ್ಲ. ಸುಮ್ಮನೆ ಕುಳಿತು ಇದನ್ನೆಲ್ಲಾ ನೋಡುತ್ತಿರುವೆಯಾ, ಹೇಡಿ ?

ಸಿಪಾರ್—ಅಕ್ಕ, ನಾನು ಹೇಡಿಯಲ್ಲ. ರಣರಂಗದಲ್ಲಿ ತಂದೆಯ ಪಾರ್ಶ್ವದಲ್ಲಿ ಆನೆಯಮೇಲೆ ಕುಳಿತು ಯುದ್ಧಮಾಡಿರುವೆನು. ನನಗೆ ಪ್ರಾಣಭಯವಿಲ್ಲ. ಆದರೆ ವಂಚನೆಯಿಂದ ಚಿಕ್ಕಪ್ಪನನ್ನು ವಧಿಸುವುದು ನನ್ನಿಂದಾಗದು.

ಜಹರತ್—ಛೀ ! ಹೋಗು.

ಸಿಪಾರ್—ನಾನೇನು ಮಾಡಲಿ ಅಕ್ಕ. ನನ್ನನ್ನು ಕ್ಷಮಿಸು, ನಾನು ಹೋಗುವೆನು. (ನಿಷ್ಕ್ರಾಂತ)

ಜಹರತ್—ಎಷ್ಟೊಂದು ತುಚ್ಛ ! ಕೆಲಸಕ್ಕೆ ಬಾರದ ಅಲ್ಪಳು ನಾನು. ತಂದೆಗೆ ಸ್ವಲ್ಪಮಾತ್ರವೂ ಸಹಾಯಮಾಡಲಾರದವಳಾಗಿರುವೆನು. ಅಯ್ಯೋ ! ಅಧಮ ನಾರೀ ಜಾತಿಯೇ. ತಾಯಿತಂದೆಗಳ ಅವಸ್ಥೆಯನ್ನು ನೋಡಿ

ಬಲ್ಲೆನು. ಬೇಕಾದಷ್ಟು ಹಣವು ಬರುವುದು. ಎಲ್ಲವನ್ನು ನಿನ್ನೊಡನೆ ಪರಲೋಕಕ್ಕೆ ತೆಗೆದುಕೊಂಡುಹೋಗುವೆ, ಜಿರ್ಹಖಾ೯!

ಜಿರ್ಹ—ತಡವೇಕೆ ? ಖೈದುಮಾಡಿರಿ.

ದಾರ—ಮಾಡಿರಿ. ಬೇಡ, ಇಲ್ಲಿ ಬೇಡ; ಹೊರಗೆ ಬನ್ನಿ. ಈ ಸ್ವರ್ಗಸನ್ನಿಧಿಯಲ್ಲಿ ನರಕದ ಅಭಿನಯವೇಕೆ? ಮಾತೇ, ವಸುಂಧರೇ, ಹೇಗೆ ನೀನೀ ಹೊರೆಯನ್ನು ಹೊರಬಲ್ಲೆ? ನೀರವದಿಂದ ಎಷ್ಟನ್ನು ಸಹಿಸಬಲ್ಲೆ? ಹೇ! ಜಗನ್ನಿಯಾಮಕ, ಕೈಗಳನ್ನು ಕಟ್ಟಿಕೊಂಡು ಎಲ್ಲವನ್ನೂ ನೋಡುತ್ತ ಕುಳಿತಿರುವೆಯೋ? ನಡೆ– ಜಿರ್ಹಖಾ೯, ಹೊರಗೆ ಹೋಗುವ. (ಎಲ್ಲರೂ ಹೊರಡಲುದ್ಯುಕ್ತರಾಗುವರು.) ನಿಲ್ಲಿರಿ; ನಿನ್ನಲ್ಲಿ ನನ್ನ ಭಿಕ್ಷೆಯೊಂದಿದೆ ಜಿರ್ಹಖಾ೯. ನಡೆಸಿಕೊಡುವೆಯಾ? ನೋಡು! ಈ ದೇವಿಯ ಮೃತ ದೇಹವನ್ನು ಲಾಹೋರಿಗೆ ಕಳುಹಿಸು; ಅಲ್ಲಿ ಸಮ್ರಾಟನ ಪರಿವಾರದ ಶವಾಗಾರದಲ್ಲದು ಗೋರಿಯಾಗಲಿ. ಇಷ್ಟು ಮಾತ್ರ ಮಾಡುವೆಯಾ? ನಾನು ನಿನ್ನನ್ನೆರಡಾವರ್ತಿ ಪ್ರಾಣದಿಂದ ರಕ್ಷಿಸಿರುವುದರಿಂದ ಇಂದೀ ಭಿಕ್ಷೆಯನ್ನು ಬೇಡುವೆನು. ಇದು ಹೊರತು ಮತ್ತೇನನ್ನೂ ನಿನ್ನಿಂದ ಅಪೇಕ್ಷಿಸುವುದಿಲ್ಲ. ಏನು ಹೇಳುವೆ, ಜಿರ್ಹಖಾ೯?

ಜಿರ್ಹಖಾ೯—ಆಜ್ಞೆಯಂತೆ ಯುವರಾಜ. ಆ ಕಾರ್ಯವನ್ನು ಮಾಡದೇ ಹೋದರೆ ನನ್ನ ಪ್ರಭುವಾದ ಔರಂಗಜೇಬನು ಕ್ರುದ್ಧನಾಗುವನು.

ದಾರಾ—ಔರಂಗಜೇಬನು ನಿನ್ನ ಪ್ರಭು; ಹುಂ! ನನಗೇನೂ ಕೋಪ ವಿಲ್ಲ; ನಡೆಯಿರಿ. (ಹಿಂದಿರುಗಿ) ನಾದಿರಾ, (ಎಂದು ಹೇಳುತ್ತಾ ಮತ್ತೆ ಹಾಸಿಗೆಯ ಸಮೀಪಕ್ಕೆ ಬಂದು ನಾದಿರಳ ಕೈಗಳಮೇಲೆ ಮುಖವಿಟ್ಟು ಕೊಳ್ಳುವನು; ಸ್ವಲ್ಪ ಹೊತ್ತಾದ ಮೇಲೆ ಎದ್ದು) ನಡೆ. ಜಿರ್ಹಖಾ೯.

(ಎಲ್ಲರೂ ಹೊರಗೆ ಹೋಗುವರು. ಸಿಪಾರನು ಮಾತ್ರ ತಾಯಿಯ ಮೃತದೇಹವನ್ನು ನೋಡಿ ಅಳುತ್ತಾ ನಿಲ್ಲುವನು)

ದಾರ—(ತೀವ್ರಕಂಠದಿಂದ) ಸಿಪಾರ್!

(ಭಯದಿಂದ ಸಿಪಾರನು ಅಳುವುದನ್ನು ನಿಲ್ಲಿಸುವನು. ಎಲ್ಲರೂ ನೀರವವಾಗಿ ಹೊರಗೆ ಹೋಗುವರು)

ಔರಂಗಜೀಬ—ಏನನ್ನು ಮಾಡಿದೆನು!

ಷಯಿಸ್ತಾಖಾ—ತಮಗೆ ಯೋಗ್ಯವಾದ ಕಾರ್ಯವನ್ನೇ ಮಾಡಿದಿರಿ, ಜಹಾಪನಾ.

ಔರಂಗಜೀಬ—ಆದರೂ.... (ಮೆಲ್ಲನೆ ಹೋಗುವನು)

ಷಯಿಸ್ತಾಖಾ—(ಸ್ವಗತ) ಔರಂಗಜೀಬ, ಹಾಗಾದರೆ ನಿನಗೂ ಸ್ವಲ್ಪ ವಿವೇಕವಿದೆ! (ಹೋಗುವನು)

## ಏಳನೆ ದೃಶ್ಯ

ಸ್ಥಾನ—ಖಿಜಿರಾಬಾದಿನಲ್ಲಿ ಒಂದು ಮನೆ. ಕಾಲ—ರಾತ್ರಿ

(ಸಿಪಾರನು ಒಂದು ಹಾಸಿಗೆಯ ಮೇಲೆ ಮಲಗಿರುವನು. ದಾರನು ಜಾಗರನಾಗಿ ಅವನಕಡೆ ನೋಡುತ್ತಿರುವನು)

ದಾರ—ದುರ್ದಾಂತ ಚಿಂತಾಂತರಂಗದಿಂ ಬಳಲುತೀ
ಬಾಲಕನ ಮೊರೆ ಕೇಳಿ ಬದುಕಲೆಂತು?
ಅನುಜಾತರವಿನೀತ ವರ್ತನೆಗೆ ತಲೆಬಾಗಿ
ನಿರ್ಲಜ್ಜನೆನಿಸಿನಾಂ ಬಾಳಲೆಂತು ?
ಜನರ ಶೋಕಾಶ್ರುವಿಂ ಬಿಸುಸುಯ್ವ ಈ ಪುರದ
ಭೀಷಣಾಕ್ರಂದನವ ಕೇಳಲೆಂತು?
ವಿದ್ರೋಹಿ ಸಂದೋಹಮಧ್ಯದೋಳ್ ಮತಿಯಳಿದು
ಧರ್ಮವಿಚ್ಯುತನಾಗಿ ಬಾಳಲೆಂತು?
ಪಿತನ ನಿರ್ಬಂಧವನು ಎಂದೆಂದು ಸಹಿಸೆನಾನು
ಮನದೊಳತಿಚಿಂತಾಗ್ನಿ ಅಕಟಕಟ ದಹಿಸುತಿಹುದು;
ಜೀವಿಸುತೆ ಈ ಖಳರ ವೈಭವವ ನೋಳ್ಪ ಮುನ್ನ
ಸಾಯುವುದೆ ಜಗದೆ ಸರ್ವಾಧಿಕ ಸೌಖ್ಯವೆನಗೆ.

ನಿದ್ರೆಮಾಡು ಸಿಪಾರ್, ನಿದ್ರೆಮಾಡು. ನಿದ್ರೆಯೇ, ಸರ್ವ ಸಂತಾಪಗಳನ್ನು ಹರಿಸುವ ನಿದ್ರೆಯೇ, ನೀನೀ ಸಿಪಾರನ ಸರ್ವ ದುಃಖಗಳೂ ಮರೆಯುವಂತೆ ಮಾಡು. ಮಗುವು ಈ ಮಳೆ ಬಿಸಿಲಲ್ಲಿ ನನ್ನೊಡನೆ ಅಲೆದಾಡಿ ಬಹು ಆಯಾಸಗೊಂಡಿರುವುದು; ನಿನ್ನ ಕೈಲಾದಷ್ಟು ಸಮಾ

ಜಹರತ್—ಹೇಡಿಗಳು ! ನನ್ನ ತಂದೆಯ ಕುಲಾಂಗಾರ ಪುತ್ರರು ನೀವು, ಹೊರಟುಹೋಗಿ. ನಾನು ನಮ್ಮ ತಂದೆಯನ್ನು ಕೊಂದುದರ ಸೇಡು ತೀರಿಸಿಕೊಳ್ಳುವೆನು ; ಬಿಡು. ಈ ಭಂಡ ! ದಸ್ಯು ! ಘಾತಕ (ಮೂರ್ಛೆ ಬೀಳುವಳು)

ಔರಂಗಜೇಬ—ಎಂತ ಉದಾರ ಯುವಕನು ಇವನು ! ಹೋಗು, ನಿನ್ನನ್ನು ನಾನು ವಧೆಮಾಡುವುದಿಲ್ಲ. ಷಯಸ್ತಾಖಾ, ಇವನನ್ನು ಗ್ವಾಲಿಯರ್ ದುರ್ಗದಲ್ಲಿಡು. ಈ ದಾರನ ಮಗಳು ಆಗ್ರಾದ ದುರ್ಗ ಪ್ರಾಸಾದ ದಲ್ಲಿ ನಮ್ಮ ತಂದೆಯ ಬಳಿ ಇರಲಿ. (ಹೋಗುವನು)

## ಎರಡನೆ ದೃಶ್ಯ

ಸ್ಥಾನ—ಆಗ್ರಾದಲ್ಲಿ ಷಾಜಹಾನನ ದುರ್ಗಪ್ರಾಸಾದ. ಕಾಲ—ರಾತ್ರಿ
ಹೊರಗೆ ವೃಷ್ಟಿಧಾರೆ. ಆಗಿಂದಾಗ್ಗೆ ಮಿಂಚು ಹೊಳೆಯುತ್ತಿದೆ.
ಷಾಜಹಾ ಮತ್ತು ಜಹರತ್ ಉನ್ನೀಸಾ.

ಷಾಜಹಾ—ಯಾರಿಗೆ ಸಾಧ್ಯ ದಾರನನ್ನು ವಧಿಸಲು? ನಾನು, ಸ್ವಯಂ ಸಮ್ರಾಟ್ ಷಾಜಹಾನನು ಪಹರೆ ಕೊಡುತ್ತಿರುವಾಗ ಯಾರಿಗೆ ಸಾಧ್ಯ ಅವನನ್ನು ಮುಟ್ಟಲು ! – ಔರಂಗಜೇಬನೇ ? ಅಲ್ಪ ! ತುಚ್ಛ ! ನಾನು ಕಣ್ಣು ಗಳನ್ನು ಕೆಂಪೇರಿಸಿದರೆ ಅವನು ಭಯದಿಂದ ಕಂಪಿಸುವನು. ನಾನು ಹೇಳಿ ದರೆ ಮಳೆಗೆರೆಯುವುದು ! ಮೇಘಗರ್ಜನೆಯಿಂದ ಸಿಡಿಲೆರಗುವುದು !

(ಹೊರಗೆ ಮೇಘಗರ್ಜನೆ)

ಜಹರತ್—ಓ ಎಂತಹ ಶಬ್ದ ! ಹೊರಗೆ ಪಂಚಭೂತಗಳ ಯುದ್ಧ ವೊಂದು ನಡೆಯುತ್ತಿದೆ. ಒಳಗೆ ಉನ್ಮತ್ತಪ್ರಾಯನಾದ ತಾತನ ಹೃದಯ ದಲ್ಲಿಯೂ ಅಂತಹುದೇ ಮತ್ತೊಂದು ಯುದ್ಧ ! ಇದೋ ಪುನಃ ಮೇಘ ಗರ್ಜನೆ.

ಷಾಜಹಾ—ಅಸ್ತ್ರಗಳನ್ನು ಕೊಡು. ಕತ್ತಿ, ಭಲ್ಲೆ, ಬಾಣ, ಫಿರಂಗಿ, ಎಲ್ಲ ಆಯುಧಗಳನ್ನೂ ತೆಗೆದುಕೊಂಡು ಬನ್ನಿ. ಅವರು ಬರುತ್ತಿದ್ದಾರೆ. ಅವರ ಸಂಗಡ ನಾನು ಯುದ್ಧ ಮಾಡುತ್ತೇನೆ. ರಣವಾದ್ಯಗಳು ಮೊಳಗಲಿ. ಧ್ವಜವನ್ನು ಎತ್ತಿ ಹಿಡಿಯಿರಿ. ........ ಇದೋ ಬಂದರು. ದೂರ ನಿಲ್ಲಿರಿ

ಹೊರಗೆ ಮೃದುವಾಗಿ ಮಾತಾಡುವುದು, ಒಳಗೆ ವಿದ್ವೇಷದ ಬೆಂಕಿಯನ್ನು ಊದಿ ಉರಿಯೆಬ್ಬಿಸುವುದು, ಭಗವಂತನೆದುರು ಕೈಜೋಡಿಸಿ ಪ್ರಾರ್ಥನೆ ಮಾಡುವುದು, ಹೃದಯದಲ್ಲಿ ರಾಕ್ಷಸೀಕೃತ್ಯಗಳನ್ನು ಚಿಂತಿಸುವುದು - ಸಾಧ್ಯವೇ ಎಂದು ಅವಾಕ್ಕಾಗಿದ್ದೇನೆ.

(ಷಾಜಹಾನನು ಬರುವನು)

ಷಾಜಹಾ‍ನ್—(ರತ್ನಾಲಂಕಾರಗಳನ್ನು ತೋರಿಸುತ್ತ) ನೋಡಿದೆಯ ಜಹರತ್, ಹೇಗೆ ಕಾಣುತ್ತೇನೆ. ಔರಂಗಜೀಬನು ಅಪಹರಿಸಿದ್ದ ರತ್ನಾಲಂಕಾರಗಳೆಲ್ಲವನ್ನೂ ಹಿಂದಕ್ಕೆ ಕಳುಹಿಸಿದ್ದಾನೆ. ಇವು ನನಗೆ ಚನ್ನಾಗಿ ಶೋಭಿಸುವುವಲ್ಲವೇ ?

ಜಹರತ್—ತಾತನಿಗೆ ಜ್ಞಾನತಪ್ಪಿದೆ, ದೊಡ್ಡಮ್ಮ. ಚಂದ್ರಮಂಡಲದ ಮೇಲೆ ಶರತ್ಕಾಲದ ಮೇಘದಂತೆ ಆಗಾಗ ಉನ್ಮಾದ ತಲೆದೋರುತ್ತಿದೆ.

ಷಾಜಹಾ‍ನ್—(ಹಠಾತ್ತಾಗಿ ಗಂಭೀರಭಾವದಿಂದ) ನಾನು ಎಷ್ಟು ಚನ್ನಾಗಿ ಕಾಣುತ್ತೇನೆ ಜಹರತ್. ನನ್ನನ್ನು ನೋಡಿದರೆ ಮದುವೆಯಾಗಬೇಕೆಂದು ಆಸೆಯಾಗುವುದಲ್ಲವೇ ನಿನಗೆ ? (ಕೋಪದಿಂದ) ಏನು, ಆಗುವುದಿಲ್ಲವೇ ? ಆಗುವುದಿಲ್ಲವೇ ? ನೀನಿನ್ನು ಚಿಕ್ಕವಳು. ಇಲ್ಲವೇ ಖೈದುಮಾಡಿಸುತ್ತಿದ್ದೆ. ಆಭರಣಗಳನ್ನು ಕಿತ್ತುಕೊಳ್ಳುತ್ತಿದ್ದೆ. .... ಈಗ ಹೇಳು ಮದುವೆಯಾಗುವುದಿಲ್ಲವೇ ?

ಜಹನಾರಾ—ಇದು ಉನ್ಮಾದವಲ್ಲ ಜಹರತ್. ತಂದೆಗೆ ಸರಿಯಾಗಿ ಜ್ಞಾನವಿದೆ. ದುರ್ಭರ ಚಿಂತಾಗ್ನಿಯಿಂದ ತಪ್ತನಾಗಿ ಹುಚ್ಚನಂತೆ ಮಾತಾಡುತ್ತಿದ್ದಾನೆ.

ಜಹರತ್—ಜ್ಞಾನಿಗಳ ಉನ್ಮಾದಾವಸ್ಥೆಗಿಂತ ಕರುಣಾಮಯವಾದ ದೃಶ್ಯ ಜಗತ್ತಿನಲ್ಲಿ ಬೇರೊಂದಿಲ್ಲ ! ಹಾ ! ಪರಮೇಶ್ವರ !

(ಅಳುವನ್ನು ಅಡಗಿಸಿಕೊಂಡು ಹೋಗುವಳು)

ಷಾಜಹಾ‍ನ್—ನಾನು ಉನ್ಮತ್ತನಲ್ಲ, ಜಹನಾರ. ಪ್ರಯತ್ನಪಟ್ಟರೆ ಸರಿಯಾಗಿ ಮಾತಾಡಬಲ್ಲೆ.

ಜಹನಾರಾ—ನಾನದನ್ನು ಬಲ್ಲೆ ಅಪ್ಪ.

ಷಾಜಹಾನ್—ಆದರೆನ್ನ ಹೃದಯ ಒಡೆಯುತ್ತಿದೆ. ಇಷ್ಟೊಂದು ದುಃಖವನ್ನು ಸಹಿಸಿಕೊಂಡು ಹೇಗೆ ಜೀವಿಸಿರುವೆನೋ ಆಶ್ಚರ್ಯ! ದಾರಾ, ಸೂಜಾ, ಮುರಾದ್ ಎಲ್ಲರನ್ನೂ ಕೊಂದನು. ಪ್ರತಿಶೋಧಕ್ಕಾಗಿ ಅವರ ಪುತ್ರರಲ್ಲೊಬ್ಬರನ್ನೂ ಉಳಿಸಲಿಲ್ಲ! ಎಲ್ಲರೂ ಹೋದರು.

(ಔರಂಗಜೇಬನ ಪ್ರವೇಶ)

ಷಾಜಹಾನ್—ಇದಾರು? (ನೋಡಿ ಭಯದಿಂದ) ಸಮ್ರಾಟ್! ಔರಂಗಜೇಬ.

ಜಹನಾರಾ—(ಆಶ್ಚರ್ಯದಿಂದ) ಹೌದು, ಔರಂಗಜೇಬ.

ಔರಂಗಜೇಬ—ತಂದೆಯೇ!

ಷಾಜಹಾನ್—ನನ್ನ ಆಭರಣಗಳನ್ನು ತೆಗೆದುಕೊಂಡು ಹೋಗಲು ಬಂದಿದ್ದಾನೆ. ಕೊಡುವುದಿಲ್ಲ. ಈ ತಕ್ಷಣ ಅವುಗಳನ್ನು ಉಕ್ಕಿನ ಒರಳಲ್ಲಿ ಹಾಕಿ ಪುಡಿ ಚೂರ್ಣ ಮಾಡಿಸುತ್ತೇನೆ. (ಹೊರಡುವನು)

ಔರಂಗಜೇಬ—(ಎದುರಿಗೆ ಬಂದು) ಇಲ್ಲ, ತಂದೆ. ನಾನು ಆಭರಣ ಗಳನ್ನು ತೆಗೆದುಕೊಂಡು ಹೋಗಲು ಬರಲಿಲ್ಲ.

ಜಹನಾರಾ—ಹಾಗಾದರೆ ತಂದೆಯನ್ನು ಕೊಲ್ಲುವ ಉದ್ದೇಶದಿಂದ ಬಂದೆಯೆಂದು ತೋರುವುದು. ಪಿತೃಹತ್ಯೆಯೊಂದು ಉಳಿಯಲೇಕೆ? ಅದೂ ನಡೆದುಹೋಗಲಿ.

ಷಾಜಹಾನ್—ವಧೆ! ನನ್ನನ್ನು ವಧೆ ಮಾಡುವೆಯ ಔರಂಗಜೇಬ? ಮಾಡು. ಮಾಡು. ಪ್ರತಿಯಾಗಿ ಈ ರತ್ನರಾಶಿಯನ್ನು ನಿನಗೆ ಕೊಡುವೆನು. ಮತ್ತು ಸಾಯುವ ಮೊದಲು ನಿನ್ನನ್ನು ಆಶೀರ್ವಾದಮಾಡುವೆನು. .... ಇದೋ ನನ್ನ ಬಿಚ್ಚಿದ ಎದೆ. ಕಠಾರಿಯಿಂದಿರಿದುಬಿಡು.

ಔರಂಗಜೇಬ—(ಮೊಣಕಾಲೂರಿ) ನನ್ನನ್ನು ಇದಕ್ಕಿಂತ ಹೆಚ್ಚು ಅಪರಾಧಿಯಾಗಿ ಮಾಡಬೇಡ ತಂದೆ. ನಾನು ಪಾಪಿ! ಘೋರಪಾಪಿ! ಪಾಪದ ಉರಿಯಿಂದ ಸುಡುತ್ತಿದ್ದೇನೆ. ನೋಡು, ತಂದೆ. ಈ ಶೀರ್ಣ ದೇಹ, ಗುಳಿಬಿದ್ದ ಕಣ್ಣುಗಳು, ಬಾಡಿ ಬಿಳುಪೇರಿದ ಮುಖ – ಇವು ನನ್ನ ತಾಪದ ಸಾಕ್ಷ್ಯಗಳು.

ಷಾಜಹಾನ್—ನಿಜ, ಬಡವಾಗಿರುವೆ! ಬಡವಾಗಿರುವೆ!

ಜಹನಾರಾ—ಔರಂಗಜೀಬ, ಈ ವೇಷದಿಂದ ಪ್ರಯೋಜನವಿಲ್ಲ. ನಿನ್ನನ್ನು ಚನ್ನಾಗಿ ಬಲ್ಲವರೊಬ್ಬರು ಇಲ್ಲಿದ್ದಾರೆ. ಯಾವ ಹೊಸ ರಾಕ್ಷಸ ಕೃತ್ಯಕ್ಕಾಗಿ ನೀನಿಲ್ಲಿ ಬಂದಿರುವೆ? ನಿನಗೆ ಬೇಕಾದುದೇನು?

ಔರಂಗಜೀಬ—ತಂದೆಯ ಕ್ಷಮೆ.

ಜಹನಾರಾ—ಕ್ಷಮೆ! ಇದೇನು ನೂತನ ಅಭಿನಯ, ಔರಂಗಜೀಬ!

ಔರಂಗಜೀಬ—ನಾನು ಬಲ್ಲೆ, ತಂಗಿ–

ಜಹನಾರಾ—ಸುಮ್ಮನಾಗು.

ಷಾಜಹಾನ್—ಮಾತಾಡುವ ಅವಕಾಶ ಕೊಡು, ಜಹನಾರಾ ....... ಔರಂಗಜೀಬ, ಏನು ಹೇಳಲಿಚ್ಛಿಸುವೆ?

ಔರಂಗಜೀಬ—ಏನೂ ಇಲ್ಲ, ತಂದೆ. ನಾನು ಅಪೇಕ್ಷಿಸುವುದು ನಿನ್ನ ಕ್ಷಮೆ.

(ಜಹನಾರಳು ವ್ಯಂಗ್ಯವಾಗಿ ನಗುವಳು)

ಔರಂಗಜೀಬ—(ಒಂದು ಸಾರಿ ಜಹನಾರಳ ಕಡೆ ನೋಡಿ, ಅನಂತರ ಷಾಜಹಾನನೊಡನೆ) ನನ್ನ ಪ್ರಾರ್ಥನೆಯನ್ನು ಕಪಟಾಚರಣೆಯೆಂದು ತಿಳಿದಿದ್ದರೆ, ನನ್ನ ಸಂಗಡ ಬಾ, ತಂದೆ; ಈ ಕ್ಷಣವಲ್ಲಿ ನಾನು ದುರ್ಗದ್ವಾರವನ್ನು ತೆರೆಯುವೆನು; ಸರ್ವರ ಸಮಕ್ಷಮ ನಿಮ್ಮನ್ನು ಮಯೂರಾಸನವಲ್ಲಿ ಕುಳ್ಳಿರಿಸಿ ಸಮ್ರಾಟನೆಂದು ಅಭಿವಾದನಮಾಡುವೆನು. ಇದೋ ನನ್ನ ರಾಜಮುಕುಟ ತಮ್ಮ ಪಾದಮೂಲದಲ್ಲಿ.

(ಮುಕುಟವನ್ನು ತೆಗೆದು ಷಾಜಹಾನನ ಪಾದಮೂಲದಲ್ಲಿಡುವನು)

ಷಾಜಹಾನ್—ನನ್ನ ಹೃದಯ ಕರಗುತ್ತಿದೆ!

ಔರಂಗಜೀಬ—ನನ್ನನ್ನು ಕ್ಷಮಿಸು, ತಂದೆ.

(ಪಾದಗಳನ್ನು ಹಿಡಿಯುವನು)

ಷಾಜಹಾನ್—ಕುಮಾರ.

(ಔರಂಗಜೀಬನನ್ನು ಕೈಹಿಡಿದೆತ್ತಿ ಅನಂತರ ಕಣ್ಣುಗಳನ್ನು ಮುಚ್ಚಿಕೊಳ್ಳುವನು)

ಜಹನಾರಾ—ಉತ್ತಮ ಅಭಿನಯ, ಔರಂಗಜೀಬ.

ಷಾಜಹಾ೯—ಸುಮ್ಮನಿರು ಜಹನಾರ. ನನ್ನ ಪುತ್ರನು ನನ್ನ ಚರಣಗಳನ್ನು ಹಿಡಿದು ಕ್ಷಮೆ ಬೇಡುತ್ತಿದ್ದಾನೆ. ಕ್ಷಮಿಸದಿರುವುದು ಹೇಗೆ ಸಾಧ್ಯ ? ....ಹಾ ನನ್ನ ಪಿತೃಹೃದಯವೇ, ಇಷ್ಟು ದಿನವೂ ವಿಸ್ಮೃತಿಯ ಅಂಧಕಾರದಲ್ಲಿ ಕುಳಿತುಕೊಂಡು ಈ ಸಮಯಕ್ಕಾಗಿ ನಿರೀಕ್ಷಿಸುತ್ತಿದ್ದೆಯ ? ಕ್ಷಣಾರ್ಧದಲ್ಲಿ ನನ್ನ ಕೋಪವೆಲ್ಲ ಎಲ್ಲಿ ಮಾಯವಾಯಿತು ?

ಔರಂಗಜೇಬ—ಬಾ ತಂದೆ. ನಾನು ನಿಮ್ಮನ್ನು ಪುನಃ ಆಗ್ರಾದ ರತ್ನಸಿಂಹಾಸನದ ಮೇಲೆ ಕುಳ್ಳಿರಿಸುತ್ತೇನೆ. ಮಕ್ಕಾಯಾತ್ರೆ ಮಾಡಿ ನನ್ನ ಪಾಪದ ಪ್ರಾಯಶ್ಚಿತ್ತ ಮಾಡಿಕೊಳ್ಳುತ್ತೇನೆ.

ಷಾಜಹಾ೯—ಇಲ್ಲ. ನಾನೀಗ ಸಮ್ರಾಟನಾಗಲು ಅಪೇಕ್ಷಿಸುವುದಿಲ್ಲ. ನನ್ನ ಜೀವನದ ಸಂಜೆ ಸಮಾಪಿಸುತ್ತಿದೆ. ಈ ಸಾಮ್ರಾಜ್ಯವನ್ನು ನೀನು ಅನುಭವಿಸು ಪುತ್ರ. ಈ ರಾಜಮುಕುಟ ನಿನ್ನದು. ಮತ್ತು ಕ್ಷಮೆ ! ಕ್ಷಮೆ ! ........ಔರಂಗಜೇಬ, ನಾನು ನಿನ್ನ ಸರ್ವಾಪರಾಧಗಳನ್ನೂ ಕ್ಷಮಿಸಿರುವೆನು. (ಕಣ್ಣುಗಳನ್ನು ಮುಚ್ಚಿಕೊಳ್ಳುವನು)

ಜಹನಾರಾ—ದಾರನನ್ನು ಕೊಂದವನಿಗೆ ಕ್ಷಮೆಯೇ ?

ಷಾಜಹಾ೯—ಸುಮ್ಮನಿರು, ಜಹನಾರಾ. ನನ್ನ ಸುಖಕ್ಕೆ ಅಡ್ಡಿ ಬರಬೇಡ. ಅವರು ಹಿಂದಿರುಗುವುದು ಸಾಧ್ಯವಲ್ಲ. ಇಷ್ಟು ದಿನವೂ ದುಃಖ ಜ್ವಾಲೆಯಲ್ಲಿ ಬೆಂದೆನು. ಚಿಂತೆಯಿಂದ ಉನ್ಮತ್ತನಾದೆನು. ಇನ್ನೆರಡು ದಿನಗಳು ಸುಖವಾಗಿರಲು ಅವಕಾಶ ಕೊಡು. ನೀನೂ ಔರಂಗಜೇಬನನ್ನು ಕ್ಷಮಿಸು, ಪುತ್ರಿ. ಔರಂಗಜೇಬ, ಜಹನಾರಳ ಕ್ಷಮೆ ಬೇಡು.

ಔರಂಗಜೇಬ—ನನ್ನನ್ನು ಕ್ಷಮಿಸು, ತಂಗಿ.

ಜಹನಾರಾ—ಕ್ಷಮೆ ! ನಾನು ತಂದೆಯಂತೆ ಅರಳು ಮರುಳಾಗಿಲ್ಲ, ಔರಂಗಜೇಬ. ರಾಜದಸ್ಯು ! ಘಾತುಕ !

ಷಾಜಹಾ೯—ಅವನೂ ನಿನ್ನಂತೆ ತಾಯಿಲ್ಲದವನು ಜಹನಾರಾ. ನಿನ್ನಂತೆ ತಬ್ಬಲಿ. ಅವನ ತಾಯಿ ಈಗ ಜೀವಿಸಿದ್ದರೆ ಏನು ಮಾಡುತ್ತಿದ್ದಳು ಜಹನಾರಾ ? ತನ್ನ ದುಃಖವನೆಲ್ಲವನ್ನೂ ನನ್ನಲ್ಲಿ ಕೂಡಿಟ್ಟು ಹೊರಟುಹೋದಳು.

...ಏಕೆ, ಜಹನಾರಾ. ಇನ್ನೂ ನೀರವವಾಗಿರುವೆ! ........ ಅತ್ತ ನೋಡು, ಸಂಜೆಯ ಬೆಳಗಿನಿಂದ ರಂಜಿತವಾದ ಯಮುನಾಪ್ರವಾಹವನ್ನು, ಎಷ್ಟೊಂದು ಸ್ವಚ್ಛ! ನದಿಯಮೇಲೆ ಆಕಾಶವಕಡೆ ನೋಡು, ಎಷ್ಟೊಂದು ಗಂಭೀರ! ತೀರದ್ದ ಕುಂಜವನವನ್ನು ನೋಡು, ಎಷ್ಟೊಂದು ಸುಂದರ ........ ಮತ್ತು ನೋಡು ಆ ನನ್ನ ಶಿಲಾಮಯ ಪ್ರೇಮಾಶ್ರು; ಅನಂತ ಆಕ್ಷೇಪದ, ಆಪ್ಲುತ ವಿಯೋಗದ ಅಮರಕಾವ್ಯ; ಆ ನನ್ನ ಸ್ಥಿರ ಮೌನ ನಿಷ್ಕಲಂಕ ಶುಭ್ರ ಮಂದಿರ – ತಾಜಮಹಲಿನ ಕಡೆ ನೋಡು, ಎಷ್ಟೊಂದು ಕರುಣ! ಇವುಗಳನ್ನು ನೋಡುತ್ತ ನೀನು ಔರಂಗಜೀಬನನ್ನು ಕ್ಷಮಿಸು, ಜಹನಾರಾ. ಮತ್ತು ತಿಳಿದುಕೊ. ಈ ಜಗತ್ತು ನಾವು ಎಷ್ಟೊಂದು ಕೆಟ್ಟುದೆಂದು ತಿಳಿದುಕೊಂಡಿರುವೆವೋ ಅಷ್ಟು ಕೆಟ್ಟದ್ದಲ್ಲ.

ಜಹನಾರಾ—ಔರಂಗಜೀಬ, ಈಗ ನಿನ್ನ ಜಯವು ಪೂರ್ಣವಾಯಿತು. ಈ ನನ್ನ ಜೀರ್ಣ, ಮುಮೂರ್ಷು, ತಂದೆಯ ಅನುರೋಧದಿಂದ ನಾನು ನಿನ್ನನ್ನು ಕ್ಷಮಿಸುವೆನು.

(ವೇಗದಿಂದ ಜಹರತಳ ಪ್ರವೇಶ)

ಜಹರತ್—ಆದರೆ ನಾನು ನಿನ್ನನ್ನು ಕ್ಷಮಿಸುವುದಿಲ್ಲ ಘಾತುಕ. ಜಗತ್ತೆಲ್ಲವೂ ನಿನ್ನನ್ನು ಕ್ಷಮಿಸಿದರೂ ನಾನು ಮಾತ್ರ ಕ್ಷಮಿಸುವುದಿಲ್ಲ. ನಾನು ನಿನ್ನನ್ನು ಶಪಿಸುತ್ತೇನೆ. ಕ್ರುದ್ಧ ಪಣಿನಿಯ ಉಷ್ಣ ನಿಶ್ವಾಸದಿಂದ ನಾನು ನಿನ್ನನ್ನು ಶಪಿಸುತ್ತೇನೆ. ಆ ಅಭಿಶಾಪದ ಭೈರವಛಾಯೆ ಭೀಷಣ ಆತಂಕದಂತೆ ಆಹಾರದಲ್ಲಿ ವಿಹಾರದಲ್ಲಿ ನಿನ್ನ ಹಿಂದೆ ಬೀಳುವುದು. ನಿದ್ರೆಯಲ್ಲಿ ಅದರ ಪರ್ವತ ಭಾರದಿಂದ ನಿನ್ನ ಹೃದಯವು ಒಡೆಯುವುದು. ಅದರ ವಿಕಟಧ್ವನಿ ನಿನ್ನ ವಿಜಯ ವಾದ್ಯದಲ್ಲಿ ಅಪಶೃತಿಯಂತೆ ಕೇಳಿಬರುವುದು. ನನ್ನ ತಂದೆಯನ್ನು ವಧೆಮಾಡಿ ನೀನು ಯಾವ ಸಾಮ್ರಾಜ್ಯವನ್ನು ಸಂಪಾದಿಸಿದೆಯೋ ಆ ಸಾಮ್ರಾಜ್ಯವನ್ನು ನೀನು ದೀರ್ಘಕಾಲ ಅನುಭವಿಸು. ಏಕೆಂದರೆ ಆ ಸಾಮ್ರಾಜ್ಯ ನಿನಗೆ ಯಮದಂಡದಂತೆ. ಅದು ನಿನ್ನನ್ನು ಒಂದು ಪಾಪದಿಂದ ಅದಕ್ಕಿಂತ ಕಠಿಣವಾದ ಮತ್ತೊಂದು ಪಾಪಕ್ಕೆ ಕರೆದೊಯ್ಯುವುದು. ಕೊನೆ

